# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 660 |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ ಗೌಡ \(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.12.2024 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮಾ ಠಾಣಾ ಎಂದರೇನು (ಸುತ್ತೋಲೆ ಅಥವಾ ಅದೇಶದ ಪ್ರತಿಯನ್ನು ನೀಡುವುದು) ಹಾಗೂ ಗ್ರಾಮ ಠಾಣಾ ವ್ಯಾಪ್ತಿಯ ಸ್ವತ್ತುಗಳು-ಇ ಖಾತಾ ವಿತರಣೆಗೆ ಅನುಸರಿಸುವ ಪ್ರಕ್ರಿಯೆ ಏನು; | ಭೂ ಮಾಪನ ಇಲಾಖೆಯ ಸರ್ವೆ ಮ್ಯಾನುವಲ್ (Karnataka Revenue Survey Manual, Vol-1) ರಂತೆ ಗ್ರಾಮ ಠಾಣಾ ಎಂದರೆ ಹಳ್ಳಿಯ (ಗ್ರಾಮದ) ಜಾಗ (Village Site) ಎಂದಿರುತ್ತದೆ.<br><br>ಗ್ರಾಮ ಪಂಚಾಯಿತಿಗಳಿಂದ ಖಾತಾಗಳನ್ನು ನಿರ್ವಹಣೆ ಮಾಡುವುದಿಲ್ಲ.<br><br>ಗ್ರಾಮ ಠಾಣಾ ವ್ಯಾಪ್ತಿಯ ಸ್ವತ್ತುಗಳಿಗೆ ಸಂಬಂಧಿಸಿದಂತೆ ದಿಶಾಂಕ್ APP ಮೂಲಕ ಆಸ್ತಿಗಳು ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಬರುವುದರ ಬಗ್ಗೆ ಧೃಢೀಕರಿಸಿಕೊಂಡ ಮಾಹಿತಿ ಹಾಗೂ ಆಸ್ತಿಯ ಸ್ವಾಧೀನತೆಗೆ ಸಂಬಂಧಿಸಿದ ದಾಖಲೆಗಳನ್ನು ಇ-ಸ್ವತ್ತು ತಂತ್ರಾಂಶದಲ್ಲಿ ಇಂಧೀಕರಿಸುವ ಮೂಲಕ ಗ್ರಾಮ ಠಾಣಾ ಸ್ವತ್ತುಗಳಿಗೆ ತೆರಿಗೆ ನಿರ್ಧರಣೆ ಪಟ್ಟಿ (ನಮೂನೆ-9 & 11A) ವಹಿಗಳ ವಿತರಣೆ ಮಾಡಲಾಗುವುದು.<br><br>ನಮೂನೆಗಳನ್ನು ವಿತರಿಸುವುದು ಸಕಾಲ ಸೇವೆಯ ಕಾರ್ಯ ವ್ಯಾಪ್ತಿಗೆ ಸೇರ್ಪಟ್ಟಿದ್ದು, 45 ದಿನಗಳೊಳಗೆ ಅರ್ಜಿದಾರರು ನಿಯಮಗಳ ಪ್ರಕಾರ ಎಲ್ಲಾ ದಾಖಲಾತಿಗಳನ್ನು ಅವರು ಒದಗಿಸಿದ್ದಲ್ಲಿ ನೀಡಬೇಕಾಗಿರುತ್ತದೆ.<br><br>ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9, 11ಎ ಮತ್ತು 11ಬಿ ಗಳನ್ನು (ತೆರಿಗೆ ನಿರ್ಧರಣೆ ಪಟ್ಟಿ) ವಿತರಿಸಲು ಗ್ರಾಮ ಪಂಚಾಯತಿ ಸಭೆಯ ಅನುಮೋದನೆ ಅಗತ್ಯವಿದ್ದು, ಮೊದಲು ಬಂದ ಅರ್ಜಿಯನ್ನು ಸ್ವೀಕೃತಿ ದಿನಾಂಕದ ಆಧಾರದ ಮೇಲೆ ಮೊದಲು ಇತ್ಯರ್ಥ ಪಡಿಸಲು (First In First Out-FIFO) ಕ್ರಮ ವಹಿಸುವಂತೆ ಹಾಗೂ ಸಕಾರಣವಿಲ್ಲದೆ ಅರ್ಜಿಗಳನ್ನು ತಿರಸ್ಕರಿಸುವುದು ಮತ್ತು ವಿಲೇ ಇಡದಂತೆ ಗ್ರಾಮ ಪಂಚಾಯತಿಗಳಿಗೆ ಸೂಚಿಸಲಾಗಿದೆ.<br><br>ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9, 11ಎ ಮತ್ತು 11ಬಿ ಗಳನ್ನು ವಿತರಿಸಲು ಅವಶ್ಯಕವಾಗಿರುವ ದಾಖಲೆಗಳ ಚೆಕ್ ಲಿಸ್ಟ್‌ಗಳನ್ನು ಗ್ರಾಮ ಪಂಚಾಯತಿಗಳ ಸೂಚನಾ ಫಲಕಗಳಲ್ಲಿ ಕಡ್ಡಾಯವಾಗಿ ಅಳವಡಿಸುವ ಬಗ್ಗೆ ಕ್ರಮ ವಹಿಸುವಂತೆ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದೆ. |

| | | |
|---|---|---|
| (ಆ) | ಗ್ರಾಮಾ ಠಾಣಾ ವ್ಯಾಪ್ತಿಯ ಸ್ವತ್ತುಗಳಿಗೆ ಇ-ಖಾತಾ ನೀಡಲು ನಮೂನೆ-9 ರ ವಹಿಯನ್ನು ಮಾಲೀಕತ್ವ ದೃಡೀಕರಣಕ್ಕೆ ಪರಿಗಣಿಸಲಾಗುತ್ತದೆಯೇ; ಇಲ್ಲದೆ ಇದ್ದಲ್ಲಿ ಯಾವ ದಾಖಲೆಗಳನ್ನು ಪರಿಗಣಿಸಲಾಗುತ್ತದೆ; | ಗ್ರಾಮ ಪಂಚಾಯಿತಿಗಳಿಂದ ಖಾತಾಗಳನ್ನು ನಿರ್ವಹಣೆ ಮಾಡುವುದಿಲ್ಲ ಹಾಗೂ ನಮೂನೆ 9ರ ವಹಿಯನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್(ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ನಿಯಮ 28(1)ರನ್ವಯ ತೆರಿಗೆಗೆ ಒಳಪಟ್ಟ ಕಟ್ಟಡ ಮತ್ತು ಭೂಮಿಗೆ ಸಂಬಂಧಿಸಿದ ತೆರಿಗೆ ನಿರ್ಧರಣೆ ಪಟ್ಟಿಯಾಗಿದ್ದು, ಸದರಿ ನಮೂನೆಯು ಮಾಲೀಕತ್ವದ ದೃಢೀಕರಣವಾಗಿರದೆ ತೆರಿಗೆ ಪಾವತಿಸುವ ಬಗ್ಗೆ ಅಧಿಭೋಗದಾರಿಕೆಯನ್ನು ದೃಢೀಕರಿಸುತ್ತದೆ. |
| (ಇ) | ನಮೂನೆ-9 ರ ವಹಿಯು ಕಳೆದು ಹೋದ ಅಥವಾ ನಾಶವಾದ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಮಾಲೀಕತ್ವ ಮತ್ತು ಅಳತೆಯನ್ನು ದೃಡೀಕರಿಸಿಕೊಳ್ಳಲಾಗುತ್ತದೆ; | |
| (ಈ) | ಗ್ರಾಮಠಾಣಾ ವ್ಯಾಪ್ತಿಯಲ್ಲಿನ ಸ್ವತ್ತುಗಳ ಗಡಿ ಮತ್ತು ಚಕ್ಕುಬಂದಿಯನ್ನು ಗುರುತಿಸಲು ಅನುಸರಿಸುವ ವಿಧಾನ ಯಾವುದು? | ಗ್ರಾಮ ಠಾಣಾ ವ್ಯಾಪ್ತಿಯಲ್ಲಿಯ ಆಸ್ತಿಗಳ ಗಡಿ ಮತ್ತು ಚೆಕ್ಕುಬಂಧಿ ಗುರ್ತಿಸಲು ಕುರಿತು ಗ್ರಾಮ ಪಂಚಾಯತಿನಿಂದ ಇ-ಸ್ವತ್ತು ನಕ್ಷೆ ಕೋರಿ ಸ್ವೀಕೃತವಾಗುವ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್ ನಲ್ಲಿ ಸ್ವೀಕರಿಸುತ್ತಿದ್ದು, ಸದರಿ ಪ್ರಕರಣಗಳನ್ನು ಅಳತೆಗೆ ವಿತರಿಸುವ, ಮತ್ತು ಕಡತಗಳ ಪರಿಶೀಲನೆ ಹಾಗೂ ಅನುಮೋದನೆಯನ್ನು ಸಹ ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್ ನಲ್ಲಿ ನಿರ್ವಹಿಸಲಾಗುತ್ತಿದೆ.<br><br>ಸರ್ಕಾರದ ಸುತ್ತೋಲೆ ಸಂ: ಆರ್‌ಡಿ 430 ಎಲ್‌ಜಿಪಿ 2013 ದಿನಾಂಕ:25-08-2014 ಮತ್ತು ಇಲಾಖೆ ಸುತ್ತೋಲೆ ಸಂಖ್ಯೆ: ಪಿಎಂಯು, ಎಂಬಜೆ.ಸಿಐಆರ್.006/ 2014-15 ದಿನಾಂಕ:05-11-2014 ಗಳನ್ವಯ ಗ್ರಾಮ ಠಾಣಾ ಆಸ್ತಿಗಳನ್ನು ಅಳತೆ ಮಾಡಿ ಸದರಿ ಆಸ್ತಿಯು ಗ್ರಾಮ ಠಾಣಾದ ಒಳಗಡೆ ಬರುತ್ತಿದ್ದಲ್ಲಿ ಇ-ಸ್ವತ್ತು ನಕ್ಷೆ ತಯಾರಿಸಿ, ಗಡಿ/ ಚೆಕ್ಕುಬಂದಿ ಗುರ್ತಿಸಿ, ನಂತರ ಸದರಿ ನಕ್ಷೆಯನ್ನು ಸಂಬಂಧಿಸಿದ ಹೋಬಳಿ ಮಟ್ಟದಲ್ಲಿರುವ ಅಟಲ್-ಜೀ ಜನಸ್ನೇಹಿ ಕೇಂದ್ರದ ಮುಖಾಂತರ ಸಾರ್ವಜನಿಕರಿಗೆ ವಿತರಿಸಲಾಗುತ್ತಿದೆ.<br><br>ಒಂದು ವೇಳೆ ಆಸ್ತಿಯು ಗ್ರಾಮ ಠಾಣಾದ ಹೊರಗಡೆ ಬರುತ್ತಿದ್ದಲ್ಲಿ ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ಸದರಿ ಆಸ್ತಿಯು ಗ್ರಾಮ ಠಾಣಾದ ಹೊರಗಡೆ ಬರುತ್ತಿರುವ ಬಗ್ಗೆ ಹಿಂಬರಹದ ಮೂಲಕ ತಿಳಿಸಲಾಗುತ್ತದೆ. |

ಸಂಖ್ಯೆ: ಗ್ರಾಅಪ 677 ಗ್ರಾಪಂಅ 2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.